

# ಓಹ್ ಗಾಡ್! ಸಿಕಾಡ!

## ಅಮೆರಿಕದಲ್ಲೀಗ ಅಪರೂಪದ ಸಿಕಾಡಗಳ ಜಾತ್ರೆ

**ಹದಿನೇಳು ವರ್ಷ ನೆಲದಡಿಯಲ್ಲಿ ಮಲಗಿದ್ದು ಈಗ ಮೇಲೆದ್ದು ಬಂದು ಅಮೆರಿಕದಲ್ಲಿ ಸುದ್ದಿಯಲ್ಲಿರುವ ಸಿಕಾಡಗಳ ಜೀವನಕ್ರಮ ಸೋಜಿಗ ಹುಟ್ಟಿಸುವಂಥದ್ದು. ಕುಂಭಕರ್ಣನಂತೆ ತಮ್ಮ ಬದುಕಿನ ಬಹುಪಾಲನ್ನು ನಿದ್ರೆಯಲ್ಲಿಯೇ ಕಳೆದು, ಎಚ್ಚರಾದ ಎರಡು ತಿಂಗಳ ಒಳಗೆ ಮೃತ್ಯುವನ್ನಪ್ಪುವ ಸಿಕಾಡಗಳ ಕುರಿತ ಕುತೂಹಲಕಾರಿ ಬರಹ ಇಲ್ಲಿದೆ.**

■ ಚೈತ್ರಿಕಾ ನಾಯ್ಕ ಹರ್ಗಿ

ಅಮೆರಿಕದಲ್ಲೀಗ ಸಿಕಾಡಗಳ ಸುಗ್ಗಿ. ಹದಿನೇಳು ವರ್ಷ ಭೂಗರ್ಭದಲ್ಲಿ ಅಜ್ಞಾತವಾಸ ಮುಗಿಸಿ ಮೇಲೆದ್ದು ಬರುತ್ತಿರುವ ಲಕ್ಷಾಂತರ ಸಿಕಾಡಗಳನ್ನು ಅಲ್ಲಿನ ಜನರು ಸಂಭ್ರಮದಿಂದಲೇ ಬರಮಾಡಿಕೊಳ್ಳುತ್ತಿದ್ದಾರೆ. ಅಮೆರಿಕದಲ್ಲಿ ಮಾತ್ರ ಕಾಣಸಿಗುವ ಈ ವಿಶಿಷ್ಟ ಜಾತಿಯ ಸಿಕಾಡಗಳು ಈಗ ಸುದ್ದಿಯಲ್ಲಿವೆ.

ಅಮೆರಿಕ ಭೂಪಟದಲ್ಲಿ ಕೆಲವು ಪ್ರದೇಶಗಳನ್ನು 'ಸಿಕಾಡಾ ವಲಯ' ಎಂದು ಗುರುತಿಸಲಾಗಿದೆ. ಆ ಪ್ರದೇಶಗಳಲ್ಲಿ 17 ವರ್ಷಕ್ಕೊಮ್ಮೆ ಸಿಕಾಡಗಳು ಪ್ರತ್ಯಕ್ಷವಾಗಿ ಮಹಾಮೇಳ ನಡೆಸುತ್ತವೆ. ಬೇರೆ ಬೇರೆ ವಲಯಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಪ್ರತ್ಯಕ್ಷವಾಗುವ ಈ ಸಿಕಾಡಗಳು 2025ರವರೆಗೂ ತಮ್ಮ ದರ್ಶನವನ್ನು ಕೊಡುತ್ತಲೇ ಇರುತ್ತವಂತೆ. 2021ಕ್ಕೆ ಒಂದು ವಲಯದಲ್ಲಿ ಕಾಣಿಸಿಕೊಂಡರೆ, ಇನ್ನೊಂದು ವಲಯದಲ್ಲಿ 2024ಕ್ಕೆ, ಮತ್ತೊಂದು ಕಡೆ 2025ಕ್ಕೆ 'ಸಿಕಾಡಾದ ಕಾಲ' ಬರುತ್ತದೆ. ಅಮೆರಿಕದಲ್ಲಿ ಇಂತಹ 12 ವಲಯಗಳಿದ್ದು, 2025ರವರೆಗೂ ಸಿಕಾಡಗಳ ಹವಾ ಮುಂದುವರಿಯುತ್ತವೆ.

ಹದಿನೇಳು ವರ್ಷಕ್ಕೊಮ್ಮೆ ಕಾಣಿಸಿಕೊಳ್ಳುವ ಸಿಕಾಡಗಳ ಪ್ರಬೇಧ ಒಂದಾದರೆ, 13 ವರ್ಷಗಳಿಗೊಮ್ಮೆ ಗುಲ್ಲೆಬ್ಬಿಸುವ ಇನ್ನೊಂದು ಪ್ರಬೇಧವೂ ಇದೆ. ಈ ರೀತಿಯ ಸಿಕಾಡಗಳು ಕಾಣಿಸಿಕೊಳ್ಳುವ ಮೂರು ವಲಯಗಳು ಅಮೆರಿಕದಲ್ಲಿವೆ.

ಭೂಮಿಯಿಂದ ಪುತಪುತನೆ ಹೊರಬೀಳುವ, ನಿಧಾನವಾಗಿ ಹರಿಯುತ್ತಾ ಮರ ಏರುವ, ರೆಂಬೆ ಕೊಂಬೆ ಕಾಂಡಗಳಿಗಂಟಿಕೊಂಡು ರೆಕ್ಕೆ ಮೂಡಿಸಿಕೊಳ್ಳುವ ಲಕ್ಷಾಂತರ ಸಿಕಾಡಗಳ ಬದುಕಿನ ರೂಪಾಂತರದ ಅಪರೂಪದ ಗಳಿಗೆಯನ್ನು ಸೆರೆಹಿಡಿಯುವಲ್ಲಿ, ಅಧ್ಯಯನ ಮಾಡುವಲ್ಲಿ ತಜ್ಞರು, ಆಸಕ್ತರು ನಿರತರಾಗಿದ್ದಾರೆ. ಅದೇ ಸಮಯದಲ್ಲಿ ಬಾಣಸಿಗರು ಈ ಸಿಕಾಡಾಗಳನ್ನು ಹಿಡಿದು ಬಗೆಬಗೆ ಖಾದ್ಯ ತಯಾರಿಸುವ ಪ್ರಯೋಗದಲ್ಲಿದ್ದಾರೆ. ಕಿರ್ರನೆ ಕಿರುಚುವ ಸಿಕಾಡಗಳ ಹಾಡು ಕೇಳಲಿಕ್ಕಾಗಿಯೇ ಕೆಲವರು ಕಾದಿದ್ದರೆ, ಇನ್ನು ಕೆಲವರಿಗದು ಕರ್ಣಕಠೋರ.

ಹೆಚ್ಚಿನ ಜಾತಿಯ ಸಿಕಾಡಾಗಳು 2ರಿಂದ 5 ವರ್ಷ ಬದುಕುತ್ತವೆ. ಆದರೆ ಉತ್ತರ ಅಮೇರಿಕಾದ ಮ್ಯಾಜಿಸಿಕಾಡಾಗಳು 13 ಮತ್ತು 17 ವರ್ಷದ ಸುದೀರ್ಘ ಅವಧಿಯ ಬದುಕು ನಡೆಸುವುದು ಮತ್ತು ಏಕಕಾಲಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಭೂಮಿಯ ಮೇಲೆ ಕಾಣಿಸಿಕೊಳ್ಳುತ್ತವೆ.